ಶ್ರೀ ಎಂ. ವಿರೂಪಾಕ್ಷಪ್ಪ.—ತಮ್ಮ ಉತ್ತರದಲ್ಲಿ 12-1-70ಕ್ಕೆ ಚಾರ್ಜ್ ತೆಗೆದುಕೊಂಡರು ಎಂದು ಹೇಳಿದ್ದೀರಿ. 12ನೇ ತಾರೀಖಿಗೆ ಯಾರಿಂದ ಅಧಿಕಾರ ವಹಿಸಿಕೊಂಡರು ಅಥವಾ ಚಾರ್ಜ್ ಯಾರಿಂದ ಲಾದರೂ ತೆಗೆದುಕೊಳ್ಳದೆಯೇ ಅಧಿಕಾರ ವಹಿಸಿಕೊಂಡರೋ ?

†ಶ್ರೀ ಡಿ. ದೇವರಾಜ ಅರಸ್.—ಶಂಕರರಾವ್ ವಾರ್ದೆ ಎನ್ನುವವರು ಲೀವ್ ತೆಗೆದುಕೊಂಡು ಹೋಗಿದ್ದರು. ಅವರು ಬಾರದಿದ್ದ ಕಾರಣದಿಂದ ಡೆಪ್ಯೂಟಿ ಕಮೀಶನರ್ ಇವರಿಗೆ ಚಾರ್ಜ್ ಕೊಡಿಸಿದರು.

ಶ್ರೀ ಎಂ. ವಿರೂಪಾಕ್ಷಪ್ಪ.—ಹೈಕೋರ್ಟ್ ಸ್ಟೇ ಯಾವಾಗ ಬಂತು, ಆ ಸಮಯದಲ್ಲಿ ಯಾರು ಸ್ಯಾಲರಿ ತೆಗೆದುಕೊಂಡರು ಮತ್ತು ಸರ್ಕಾರ ಅವರ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿತು ?

ಶ್ರೀ ಡಿ. ದೇವರಾಜ ಅರಸ್.—ಅಧಿಕಾರಿಗಳು ಏನಾದರೂ ಕಾರಣದಿಂದ ಚಾರ್ಜ್ ಕೊಡುವುದಕ್ಕೆ ತಪ್ಪಿಸಿಕೊಂಡರೆ, ಅದರ ನಿಜಾಂಶವನ್ನು ತಿಳಿದು ಡೆಪ್ಯೂಟಿ ಕಮೀಷನರು ಕ್ರಮ ತೆಗೆದುಕೊಳ್ಳುತ್ತಾರೆ. ಇಲ್ಲಿಯೂ ಡೆಪ್ಯೂಟಿ ಕಮೀಶನರ್ ಅವರ ಚಾರ್ಜ್ ತೆಗೆದುಕೊಂಡು ಕೊಟ್ಟಿದ್ದಾರೆ. ಅದರ ಮೇಲೆ ಅವರ ರಿಟ್ ಹೋಗಿದ್ದಾರೆ. ಆ ರಿಟ್ ಈಗ ವಜಾ ಆಗಿದೆ.

ಶ್ರೀ ಜೆ. ಎಲ್. ಕಬಾಡಿ.—ಆ ಆಫೀಸಿನಲ್ಲಿ ಕುರ್ಚಿ ಮೇಜು ಎಲ್ಲಾ ಹೊಸತು ಖರೀದಿ ಮಾಡಿ ಹೊಸ ಆಫೀಸೇ ಶುರು ಮಾಡಿದ್ದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.—ಸರ್ಕಾರದ ಅಧಿಕಾರದ ವ್ಯಾಪ್ತಿಯೊಳಗೆ ಅದನ್ನು ಮಾಡಿದ್ದಾರೆ. ಯಾರಾದರೂ ಅಧಿಕಾರಿ ಚಾರ್ಜ್ ಕೊಡುವುದಕ್ಕೆ ತಪ್ಪಿಸಿಕೊಳ್ಳುತ್ತಾನೆ ಅಂದಾಗ ಅವರು ಎಷ್ಟು ದೊಡ್ಡ ಅಧಿಕಾರಿಯಾದರೂ ಅವರಿಂದ ಕಿತ್ತುಕೊಂಡು ಚಾರ್ಜ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ವಿರೂಪಾಕ್ಷಪ್ಪ.—5 ತಿಂಗಳು 24 ದಿವಸದ ಸ್ಯಾಲರಿ ಯಾರಿಗೆ ಕೊಡಬೇಕಾಗಿರುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ಅದು ಸರ್ಕಾರಕ್ಕೆ ಬಂದಾಗ ಎಕ್ಸಾಮಿನ್ ಮಾಡಬೇಕಾಗುತ್ತದೆ. ಆಮೇಲೆ ಅದನ್ನು ಕೊಡಬೇಕೇ ಬೇಡವೇ ಎಂದು ನಿರ್ಣಯ ಮಾಡಬೇಕಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಆ ಅಧಿಕಾರಿಯನ್ನು ಪ್ರಿಮ್ಯಾಚೂರ್ ಟ್ರಾನ್ಸ್‌ಫರ್ ಮಾಡಿದರು ಎಂಬುದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.—ಪ್ರಿಮ್ಯಾಚೂರ್ ಟ್ರಾನ್ಸ್‌ಫರ್ ಮಾಡಬೇಕಾದಾಗ ಸರ್ಕಾರದವರು ಮಾಡಬೇಕಾಗುತ್ತದೆ. ಸರ್ಕಾರೀ ಅಧಿಕಾರಿಗಳು ಅಧಿಕಾರದಲ್ಲಿದ್ದಾಗ ಅದೇ ತಮ್ಮ ಅನುವಂಶಿಕ ಹಕ್ಕು ಮತ್ತು ಮನೆ ಎಂದು ತಿಳಿದುಕೊಂಡಿರುವುದಕ್ಕಾಗುವುದಿಲ್ಲ.

SRI C. M. ARUMUGHAM.—Will the Government consider to transfer some of these Secretaries to Government and Commissioners who are here in the headquarters for the last ten years?

SRI D. DEVARAJ URS.—All that does not arise out of this question These things are being considered.

VISIT OF PRESS DELEGATION FROM DELHI

651. SRI B. PUTTASWAMAIAH (Ramanagaram).—Will the hie Minister be pleased to state :—

(*a*) whether the State Government had invited a Press Delegation from Delhi to visit the State during this year;

(*b*) if so, the number of Press Representatives visited ;

(*c*) the details of their travel in the State ;

(*d*) the results achived therefrom ;

(*e*) the expenditure incurred on the tour ?

SRI D. DEVARAJ URS(Chief Minister).—

(*a*) Yes, (during 1972).

(*b*) Six.

(*c*) Developmental projects and places of Tourist interest in the State, Hemavathi Project, Mysore Iron and Steel Ltd., Sharavathy Project, Kalinadi Project, Upper Krishna Project in Almatti and Hampi Ruins in Hospet.

(*d*) The visit helped them to acquaint themselves at Firsthand with the image of Mysore and its progress achieved in various sectors and to give wide publicity for the benefit of persons residing outside the State. Some press reports about the projects have already appeared in the papers.

(*e*) Rs. 8,502.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮೈಸೂರು ರಾಜ್ಯದಲ್ಲಿ ಪತ್ರಿಕಾ ಕರ್ತರು ಇಲ್ಲದೆ ಹೊರಗಡೆಯಿಂದ ಕರೆಸಿದ್ದೀರಾ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ಮೈಸೂರು ರಾಜ್ಯದಲ್ಲಿಯೂ ಇದ್ದಾರೆ; ಹೊರಗಡೆಯೂ ಇದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸರ್ಕಾರಕ್ಕೆ ಮೈಸೂರು ರಾಜ್ಯದಲ್ಲಿರತಕ್ಕಂತಹ ಪತ್ರಿಕಾ ಕರ್ತರು ಮಾಹಿತಿ ಪಡೆಯುವ ಬಗೆ ಶಂಕೆ ಮತ್ತು ಅನುಮಾನ ಏನಾದರೂ ಇದೆಯೇ?

ಶ್ರೀ ಡಿ. ದೇವರಾಜ ಅರಸ್.—ಇನ್ನೊಬ್ಬ ಪತ್ರಿಕಾ ಕರ್ತರು ಇಲ್ಲಿ ಬಂದು ಅಂಕಿ ಅಂಶಗಳನ್ನು ಪಡೆದರೆ ಅದರಲ್ಲಿ ತಮಗೆ ಶಂಕೆ ಬರುವುದಕ್ಕೆ ಕಾರಣವಾದರೂ ಏನು ಎಂದು ಹೇಳುತ್ತೀರಾ?

ಶ್ರೀ ಎಚ್. ಎಸ್. ಸಿದ್ದಪ್ಪ.—ಹೊರಗಡೆ ಇರತಕ್ಕಂತಹ ಪತ್ರಿಕಾ ಪ್ರತಿನಿಧಿಗಳು ಮೈಸೂರಿನ ದೇಶದಲ್ಲಿಯೂ ಇದ್ದಾರೆ. ಉದಾಹರಣೆಗೆ ಪಿಟಿಐ ಯುಎನ್ಐ ಇವರ ಪ್ರತಿನಿಧಿಗಳು ಮೈಸೂರು ರಾಜ್ಯದಲ್ಲಿ ಇದ್ದಾರೆ. ಹಾಗಿರುವಾಗ ಹೊರಗಡೆಯಿಂದ ಏಕೆ ಕರೆಸಿದ್ದೀರಿ?

ಶ್ರೀ ಡಿ. ದೇವರಾಜ ಅರಸ್.—ಇವರು ನ್ಯೂಸ್ ಏಜೆನ್ಸೀಸ್. ಅದಲ್ಲದೆ ಅಮೃತ ಬಜಾರ್ ಪತ್ರಿಕಾ, ಸ್ಟೇಟ್ಸ್ಮ್ಯಾನ್, ಎಕನಾಮಿಕ್ ಟೈಂಸ್—ಇತ್ಯಾದಿ ಹೊರಗಡೆ ಪೇಪರುಗಳು ಇವೆ. ಆ ಮೇಲೆ ಕೆಲವು ಹಿಂದಿ ಪತ್ರಿಕೆಗಳೂ ಇವೆ. ಹೊರಗಡೆಯಿಂದ ಕರೆಸುವುದು ಹೊಸದೇನೂ ಅಲ್ಲ. ಮೈಸೂರು ದೇಶದಲ್ಲಿ ಇರತಕ್ಕಂತಹ ಡೆವಲಪ್‌ಮೆಂಟ್ ಬಗ್ಗೆ, ಪ್ರೊಜೆಕ್ಟುಗಳ ಬಗ್ಗೆ—ಇತ್ಯಾದಿಗಳನ್ನು ಇವರು ನೋಡಿಕೊಂಡು ಪ್ರಚಾರ ಮಾಡುವುದೇ ಕರೆದಿರುವ ಉದ್ದೇಶ.

ಶ್ರೀ ವಾಟಾಳ್ ನಾಗರಾಜ್.—ದೆಹಲಿಯ ಪತ್ರಿಕಾ ಕರ್ತರನ್ನು ತಾವು ಕರೆಸಿರುವುದು ದೆಹಲಿಯಲ್ಲಿ ತಮ್ಮ ವರ್ಚಸ್ಸನ್ನು ಬೆಳೆಸುವುದಕ್ಕೆಯೇ?

ಶ್ರೀ ಡಿ. ದೇವರಾಜ ಅರಸ್.—ಹೌದು, ತಾವು ವರ್ಚಸ್ಸು ಬೀರುವುದರಲ್ಲಿ ವಿಫಲರಾಗಿದ್ದೀರಿ ಎಂದು, ಅದಕ್ಕೆ ಹಾಗೆ ಮಾಡಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಈ ಪತ್ರಿಕೋದ್ಯಮಿಗಳಿಗೆ ಖಾಯಂ ಆಗಿ ಇಲ್ಲಿ ಆಫೀಸುಗಳನ್ನು ಮಾಡಿ ಕೊಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಆಗಿಂದಾಗ್ಗೆ ಅವರನ್ನು ಕರೆಸತಕ್ಕ ಪದ್ಧತಿ ಇದೆ. ಮೊನ್ನೆ ಏಶ್ಯನ್ ಪ್ರೆಸ್ ಕಾನ್‌ಫರೆನ್ಸ್ ಆಯಿತು. ಏಷ್ಯಾದ ಎಲ್ಲಾ ಕಡೆಗಳಿಂದಲೂ ಪ್ರೆಸ್ ಡೆಲಿಗೇಟ್ಸ್ ಬಂದಿದ್ದರು. ಇವತ್ತು ಪತ್ರಿಕಾ ಪ್ರಪಂಚ ಬಹಳ ದೊಡ್ಡದಾಗಿದೆ. ನಮ್ಮ ಆಧುನಿಕ ಯುಗದಲ್ಲಿ ಸರ್ಕಾರ ಮಾಡತಕ್ಕ ಕೆಲಸಕಾರ್ಯಗಳನ್ನು ಮತ್ತು ಇನ್ನೂ ಅನೇಕ ಸಮಸ್ಯೆಗಳನ್ನು ಪತ್ರಿಕೆಗಳ ಮುಖಾಂತರ ಪ್ರಚಾರ ಮಾಡತಕ್ಕ ಅಗತ್ಯವಿದೆ. ಹೀಗೆ ಆದನ್ನು ಎಲ್ಲಾ ಸರ್ಕಾರಗಳು ಗಮನಿಸಿ ಅದರ ಬಗ್ಗೆ ಸೂಕ್ತ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ನಾವು ಸಹ ಅದೇ ರೀತಿ ಮಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಉತ್ತರದಲ್ಲಿ ಪತ್ರಿಕಾ ಕರ್ತರಿಗೆ ೮ ಸಾವಿರ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದೀರಿ. ಅದರಲ್ಲಿ ಹೋಟೆಲ್ ಅಶೋಕಾದಲ್ಲಿ ಉಳಕೊಂಡಿರುವ ಖರ್ಚು ಸಹ ಸೇರಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಹೌದು.

BUILDINGS UNDER CONSTRUCTION AT MUNDGOD

74. SRI V. M. GHADI(Haliyal).—Will the Minister for Municipal Administration be pleased to state :—

(*a*) whether the Mysore Housing Board has taken the construction work of the ten buildings at Mundgod ;

(*b*) if so, the estimated cost of these buildings ;

(*c*) when this work was undertaken ;

(*d*) the progress of the work at present?

SRI B. BASAVALINGAPPA(Minister for Municipal Administration).—

(*a*) Yes. Ten buildings under Low Income Group Housing Scheme have been taken up.

(*b*)

1.	2 houses	34,400
2.	2 houses	31,400
3.	2 houses	30,000
4.	4 houses	63,600
5.	Cost of land and development charges.	15,000
	Total estimated cost	1,74,400

(*c*) Sl. No. 1 on 28-3-1969
Sl. No. 2 on 5-7-1969
Sl. No. 3 on 15-5-1969
Sl. No. 4 on 21-4-1969

(*d*) 8 buildings are at lintel level and 2 buildings are at foundation level.

ಶ್ರೀ ವಿ. ಎಂ. ಘಾಡಿ.—ಈ ಕಟ್ಟಡಗಳನ್ನು ಕಟ್ಟಲು ನಾಲ್ಕು ವರ್ಷ ವಿಳಂಬವಾಗುವುದಕ್ಕೆ ಕಾರಣವೇನು ?

† ಶ್ರೀ ಬಿ. ಬಸವಲಿಂಗಪ್ಪ.—ನಿರ್ಮಿತಿಯಲ್ಲಿ ಆಸ್ಕರಾಲಿ ಅಂಡ್ ಸನ್ಸ್ ಎಂಬುವರಿಗೆ ಕಂಟ್ರಾಕ್ಟ್ ಕೊಟ್ಟಿದ್ದರು. ಅವರು ಕಂಟ್ರಾಕ್ಟನ್ನು ವಿಧಿ ಪ್ರಕಾರ ಮಾಡಿಲ್ಲ. ಆ ಮೇಲೆ ಆರ್. ಎ. ರಾಡೆ ಎನ್ನುವ ಇನ್ನೊಬ್ಬ ಕಂಟ್ರಾಕ್ಟರನ್ನು ನೇಮಿಸಿದ್ದೇವೆ. ಆದ್ದರಿಂದ ಸ್ವಲ್ಪ ವಿಳಂಬವಾಯಿತು.

ಶ್ರೀ ವಿ. ಎಂ. ಘಾಡಿ.—ಇನ್ನು ಎರಡು ಕಟ್ಟಡ ಫೌಂಡೇಶನ್ ಲೆವೆಲ್‌ನಲ್ಲಿ ಇದೆ ಎಂದು ಹೇಳುತ್ತಿದ್ದೀರಿ, ೮ ಕಟ್ಟಡ ಲಿಂಟೆಲ್ ಲೆವಲಿಗೆ ಬಂದಿದೆ ಎಂದು ಹೇಳಿದ್ದೀರಿ. ಆದ್ದರಿಂದ ಈ ೧೦ ಕಟ್ಟಡಗಳ ಕೆಲಸವನ್ನು ಯಾವಾಗ ಮುಗಿಸುತ್ತೀರಿ ?